ಶ್ರೀ ಎಂ. ರಘುಪತಿ.—ಮಂಗಳೂರು ಹಳೆಬಂದರಿನ ಆಳಿವೆಯಲ್ಲಿ ಹೂಳೆತ್ತುವ ಕೆಲಸವನ್ನು ಮೆಸರ್ಸ್ ಬೋಸ್ ಡ್ರೆಡ್ಜಿಂಗ್ ಸರ್ವೀಸಸ್ ಅವರಿಗೆ ಸುಮಾರು ೧೨ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮತ್ತು ಮಿನಿಗಾರಿಕೆ ವಾರ್ಫ್‌ನಲ್ಲಿ ಆದೇ ಕಂಪನಿಗೆ ಸುಮಾರು ೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಾಮಗಾರಿಯನ್ನು ವಹಿಸಲಾಗಿದೆ. ಅವರು ಯಂತ್ರಗಳನ್ನೆಲ್ಲಾ ಜೋಡಿಸಿದ್ದು ಹೂಳೆತ್ತುವ ಕೆಲಸವನ್ನು ಈಗ ತಾನೇ ಪ್ರಾರಂಭಿಸಿದ್ದಾರೆ.

ಮಲ್ಪೆ ಮೀನುಗಾರಿಕೆ ಬಂದರಿನಲ್ಲಿನ ಹೂಳೆತ್ತುವ ಕೆಲಸವನ್ನು ೩೬ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಮೆಸರ್ಸ್ ಆಂಧ್ರ ಸಿವಿಲ್ ಕನ್ಸ್‌ಟ್ರಕ್ಷನ್ ಕಂಪನಿ ಅವರಿಗೆ ವಹಿಸಿದ್ದು, ಇವರು ಹೂಳೆತ್ತುವ ಕೆಲಸಕ್ಕಾಗಿ ಯಂತ್ರಗಳನ್ನು ತಂದು ಜೋಡಿಸಿದ್ದಾರೆ ಹೂಳೆತ್ತುವ ಕೆಲಸ ಸಧ್ಯದಲ್ಲೇ ಪ್ರಾರಂಭವಾಗಲಿದೆ,
೧-೦೦ ಪಿ. ಎಂ.

೫) ಬಾಗೇಪಲ್ಲಿ ಕ್ಷೇತ್ರದಲ್ಲಿ ಗೂಳೂರಿನಿಂದ ಪಾರ್ವತೀಪುರ ಲಂಬಾಣಿಯವರೆಗೆ ಇರುವ ರಸ್ತೆಯ ಕೆಲಸ ಅಪೂರ್ಣವಾಗಿರುವುದರ ಬಗ್ಗೆ.

ಶ್ರೀ ಬಿ. ನಾರಾಯಣಸ್ವಾಮಿ.—ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ಕ್ಷೇತ್ರದ ಗೂಳೂರು ಹೋಬಳಿ ಗೂಳೂರಿನಿಂದ ಪಾರ್ವತೀಪುರ ಲಂಬಾಣಿಯವರೆಗೆ ಹೋಗುವ ರಸ್ತೆಯಲ್ಲಿ ಸೇತುವೆ ಅರ್ಧ ಕೆಲಸ ಮಾಡಿ ಹಲವಾರು ವರ್ಷಗಳಾದರೂ ಇದುವರೆಗೂ ಪೂರ್ಣ ಕೆಲಸವಾಗದೆ ಇರುವುದರಿಂದ ಸದರಿ ಗ್ರಾಮದ ಲಂಬಾಣಿಯವರಿಗೆ ಎತ್ತು ಗಾಡಿ ಹೋಗಲು ತುಂಬಾ ತೊಂದರೆಯಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಇದನ್ನು ಗಮನಿಸಲಾಗಿದೆ. ಇದನ್ನು ಸಂಬಂಧಪಟ್ಟ ಜಿಲ್ಲಾ ಪರಿಷತ್ತಿಗೆ ತಿಳಿಸುತ್ತೇನೆ.

೬) ಪ್ರೌಢಶಾಲಾ ಶಿಕ್ಷಕರಿಗೂ ವೃತ್ತಿ ಶಿಕ್ಷಕರಿಗೂ ಅಂತರವಿಲ್ಲದಂತೆ ವೇತನ ಶ್ರೇಣಿಯನ್ನು ಹೆಚ್ಚಿಸುವುದರ ಬಗ್ಗೆ.

ಶ್ರೀಮತಿ ಸುಮಾವಸಂತ,—ಪ್ರೌಢಶಾಲಾ ಸಹ ಶಿಕ್ಷಕರ ವೇತನವನ್ನು ಪುನರ್ ವಿಮರ್ಶಿಸಿ ಹೆಚ್ಚಿಸಲು ದ್ವಿಸದಸ್ಯ ಆಯೋಗವನ್ನು ಸರ್ಕಾರ ನೇಮಿಸಿರುವುದು ಸಂತೋಷದ ವಿಷಯ.

ಪ್ರೌಢಶಾಲೆಗಳಲ್ಲಿ ಸಹ ಶಿಕ್ಷಕರಂತೆಯೇ ಸಮಾನವಾಗಿ ಸೇವೆ ಸಲ್ಲಿಸುತ್ತಿರುವ ವೃತ್ತಿ ಶಿಕ್ಷಕರಿಗೂ ಇವರ ಸಂಗಡವೇ ಹೆಚ್ಚು ಅಂತರವಿಲ್ಲದಂತೆ ವೇತನ ಶ್ರೇಣಿಯನ್ನು ಹೆಚ್ಚಿಸಬೇಕೆಂದು ಕೋರುತ್ತೇನೆ. ವೃತ್ತಿ ಶಿಕ್ಷಕರ ವೇತನ ಶ್ರೇಣಿಯನ್ನು ಹೆಚ್ಚು ಮಾಡಿದರೆ ಒಂದೇ ಶಾಲೆಯಲ್ಲಿ ಅವರಂತೆಯೇ ಸಮಾನ ಕೆಲಸ ಮಾಡುತ್ತಿರುವ ವೃತ್ತಿ ಶಿಕ್ಷಕರ ವೇತನ ಶ್ರೇಣಿಯ ಅಂತರದಲ್ಲಿ ಅಜಗಜಾಂತರ ವ್ಯತ್ಯಾಸವಾಗುತ್ತದೆ, ಇದರಿಂದ ಸಹಜವಾಗಿಯೇ ವೃತ್ತಿ ಶಿಕ್ಷಕರ ವೇತನ ಶ್ರೇಣಿ ಕಡಿಮೆಯಾದಂತಾಗಿ ಅವರಿಗೆ ಸರ್ಕಾರವೇ ಮಾನಸಿಕ ತೊಂದರೆ ಕೊಟ್ಟಂತಾಗುತ್ತದೆ.

ಸರ್ಕಾರವು ಈ ಹುತದಲ್ಲಿ ವೃತ್ತಿ ಶಿಕ್ಷಕರ ಸಂಘದ ಕೋರಿಕೆಯನ್ನು ಪರಿಶೀಲಿಸಿ ಸಹಶಿಕ್ಷಕರ ಬೇಡಿಕೆಯಂತೆಯೇ ೧೫ ವರ್ಷ ಸೇವೆ ಸಲ್ಲಿಸಿದ ವೃತ್ತಿ ಶಿಕ್ಷಕರಿಗೆ ೨ನೇ ವರ್ಗದ ಸ್ಥಾನದಲ್ಲಿ ೨೦ ವರ್ಷ ಸೇವೆ ಸಲ್ಲಿಸಿದ ವೃತ್ತಿ ಶಿಕ್ಷಕರಿಗೆ ೧ನೇ ವರ್ಗದ ಸ್ಥಾನವನ್ನು ನೀಡಿ ವೇತನ ಶ್ರೇಣಿಯಲ್ಲಿ ಹೆಚ್ಚಿಸುವಂತೆ ಆದೇಶ ಹೊರಡಿಸಿ ವೃತ್ತಿ ಶಿಕ್ಷಕರ ಮಾನಸಿಕ ತೊಂದರೆಯನ್ನು ನಿವಾರಿಸುವಂತಾಗಲಿ ಎಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್. ಮಾನ್ಯ ಸಭಾಧ್ಯಕ್ಷರೆ, ಆವರು ಹೇಳಿರತಕ್ಕಂಥ ಬೇಡಿಕೆಗಳನ್ನು ನಾನು ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.